ಇಂದು ದಿಃ 06.01.2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಎ ಎಸ್ ವಕೀಲರಿಂದಃ

ಕರಾರು ಸಂಧರ್ಭದಲ್ಲಿ ಮಹದೇವಪ್ಪರವರ ಕುಟುಂಬಕ್ಕೆ ಎಷ್ಟು ಹಣ ಕೊಟ್ಟಿದ್ದೇನೆ ಎಂದು ನನಗೆ ನಿರ್ದಿಷ್ಟವಾಗಿ ನೆನಪಿಲ್ಲ, ಆದರೆ ನಗದು ರೂಪದಲ್ಲಿ ಕೊಟ್ಟಿದ್ದೇನೆ. 3 ಎಕರೆ ಆಸ್ತಿಯನ್ನು ನಾನು ಮಹದೇವಪ್ಪ ಕುಟುಂಬದಿಂದ ಖರೀದಿಸಿರುತ್ತೇನೆ. ತಲಾ 1 ಎಕರೆಗೆ ರೂ.1,30,000/- ಎಂದು ತೀರ್ಮಾನವಾಗಿತ್ತು. ಕ್ರಯ ಪತ್ರವು ದಿನಾಂಕ 10.12.2010ರಂದು ನಂಜನಗೂಡಿನಲ್ಲಿ ಆಯಿತು. ಕ್ರಯ ಪತ್ರದ ದಿನಾಂಕದಂದು ಸಹ ಎಷ್ಟು ಹಣ ಕೊಟ್ಟಿದ್ದೆ ಎಂದು ನೆನಪಿಲ್ಲ. ಕರಾರು ಸಮಯದಲ್ಲಿ 90 ಸಾವಿರ ಕಳೆದು ಉಳಿಕೆ ಹಣವನ್ನು ಮಹದೇವಪ್ಪರವರಿಗೆ ಕೊಟ್ಟಿದ್ದೇನೆ. ಆ ದಿನ ಮಹದೇವಪ್ಪರವರ ಹೆಂಡತಿ ಮತ್ತು 4 ಜನ ಮಕ್ಕಳು ಬಂದಿದ್ದರು. ಸದರಿ ಹಣವನ್ನು ನಾನು ಉಪ ನೊಂದಣಾಧಿಕಾರಿಗಳ ಕಛೇರಿಯಲ್ಲಿ ಕೊಟ್ಟಿದ್ದೆ. ಆಗ ಸಾಕ್ಷಿದಾರರಾದ ಮಹದೇವಸ್ವಾಮಿ ಇದ್ದರು ಮತ್ತು ಸಹಿ ಮಾಡಿರುತ್ತಾರೆ. ಮಹದೇವಸ್ವಾಮಿಯನ್ನು ಅವರೇ ಕರೆದುಕೊಂಡು ಬಂದಿದ್ದರು. ಮಹದೇವಸ್ವಾಮಿಯನ್ನು ನ್ಯಾಯಾಲಯದಲ್ಲಿ ಸಾಕ್ಷಿದಾರರನ್ನಾಗಿ ಮಾಡಬಹದು.

ನಾನು ಈ ಮೇಲೆ ಹೇಳಿದ ಎಲ್ಲಾ ವಿವರಗಳನ್ನು ಕ್ರಯ ಪತ್ರದಲ್ಲಿ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ಮಹದೇವಪ್ಪರವರ ಕುಟುಂಬದವರಿಗೆ ನಾನು ಯಾವುದೇ ಹಣ ಕೊಟ್ಟಿಲ್ಲ ಮತ್ತು ಅವರ ಕುಟುಂಬಕ್ಕೆ ತಿಳಿಯದ ರೀತಿಯಲ್ಲಿ ನಿಪಿ 1 ರ ಕ್ರಯ ಪತ್ರವನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 11.04.2011 ಮಹದೇವಚಾರ್ ಮಲ್ಲಿಕಾರ್ಜುನರವರು ಕ್ರಯ ಪತ್ರವನ್ನು ನಂಜನಗೂಡಿನಲ್ಲಿ ಬರೆದುಕೊಟ್ಟಿರುತ್ತಾರೆ. ಆ ಸಮಯದಲ್ಲಿ ಸಂಬಂಧಪಟ್ಟ ಎಲ್ಲಾ ವ್ಯಕ್ತಿಗಳು ಹಾಜರಿದ್ದರು. ಕ್ರಯ ಪತ್ರ ಬರೆದ ಆಸ್ತಿಯ ಸರ್ವೆ ನಂ.57/12 ಆಗಿರುತ್ತದೆ. ಕ್ರಯದ ಕರಾರು ಆದಾಗ ಎಷ್ಟು ಹಣ ಕೊಟ್ಟಿದ್ದೆ ಎಂದು ನನಗೆ ನಿರ್ದಿಷ್ಟವಾಗಿ ನೆನಪಿಲ್ಲ. ಕ್ರಯ ಪತ್ರ ಆದ ದಿನವೂ ಸಹ ನಾನು ನಿರ್ದಿಷ್ಟವಾಗಿ ಎಷ್ಟು ಹಣ ಕೊಟ್ಟಿದ್ದೆ ಎಂದು ನೆನಪಿಲ್ಲ. ನಿಪಿ 1 ರ ಕ್ರಯ ಪತ್ರವನ್ನು ಮಹದೇವಪ್ಪರವರ ಕುಟುಂಬದವರು ಬರೆದುಕೊಟ್ಟಿಲ್ಲ ಮತ್ತು ಆ ಕ್ರಯ ಪತ್ರ ಬರೆದುಕೊಟ್ಟಿರುವ ವಿಚಾರ ಅವರಿಗೆ ತಿಳಿದಿಲ್ಲ ಎಂದರೆ ಸರಿಯಲ್ಲ. ಕ್ರಯ ಪತ್ರದಲ್ಲಿ ನಮೂದು ಮಾಡಿರುವ ಹಣವನ್ನು ಪ್ರತಿವಾದಿಗಳಿಗೆ ನಾನು ಯಾವ ರೀತಿಯಲ್ಲೂ ಪಾವತಿ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳನ್ನು ಕಛೇರಿಗೆ ಕರೆದುಕೊಂಡು ಹೋಗಿ ದುರಸ್ಥಿ ಮಾಡಿಸಿಕೊಡುತ್ತೇನೆ ಎಂದು ನಂಬಿಸಿ ಕ್ರಯ ಪತ್ರ ಮಾಡಿಸಿಕೊಂಡಿಸಿದ್ದೇನೆ ಎಂದರೆ ಸರಿಯಲ್ಲ. ಕ್ರಯ ಪತ್ರವು 2010-11 ಸಾಲಿನಲ್ಲಿ ಆಗಿತ್ತು. ಕ್ರಯ ಪತ್ರ ಆದ ತಕ್ಷಣ ಖಾತೆ ಮಾಡಿಕೊಡಿ ಎಂದು ನಾನು ಅರ್ಜಿಯನ್ನು ಕೊಟ್ಟಿದ್ದೆ. ನಂತರ 2013, 2017ನೇ ಸಾಲಿನಲ್ಲೂ ಸಹ ಅರ್ಜಿ ಕೊಟ್ಟಿದ್ದೇನೆ.

ಕ್ರಯ ಪತ್ರದಂತೆ ಖಾತೆಯನ್ನು ನನ್ನ ಹೆಸರಿಗೆ ಮಾಡಲಾಗುವುದಿಲ್ಲ ಎಂದು ಎಂ ಆರ್ 21/2010-11ರಂತೆ ನನ್ನ ಅರ್ಜಿ ತಿರಸ್ಕೃತವಾಗಿದೆ ಎಂದರೆ ಸರಿ. ತಿರಸ್ಕಾರವಾದ ನಂತರ ನಾನು ತಕ್ಷಣದಲ್ಲಿ ಮೇಲ್ಮನವಿ ಸಲ್ಲಿಸಿಲ್ಲ, ಕಾರಣ ನನ್ನ ಹೆಸರಿಗೆ ಖಾತೆಯಾಗಬಹುದು ಎಂದು ನಾನು ತಿಳಿದಿದ್ದೆ. ತಿರಸ್ಕಾರವಾದ ನಂತರ 10 ವರ್ಷ ಸುಮ್ಮನಿದ್ದು 09.05.2005ರಲ್ಲಿ ಅರ್ಜಿ ಕೊಟ್ಟಿದ್ದೆ ಎಂದರೆ ನಾನು ಆ ಮೊದಲೇ ಸಹ ಅರ್ಜಿ ಕೊಟ್ಟಿದ್ದೆ ಎನ್ನುತ್ತಾರೆ. 2022ರಲ್ಲಿ ನಾನು ಮನವಿ ಸಲ್ಲಿಸಿದ್ದರೂ ಸಹ ಕ್ರಯ ಪತ್ರದಂತೆ ಖಾತೆ ಮಾಡಲಾಗುವುದಿಲ್ಲ ಎಂದು ನನ್ನ ಅರ್ಜಿ ತಿರಸ್ಕೃತವಾಯಿತು ಎಂದರೆ ಸರಿ. ಮೇಲ್ಮನವಿ ತಿರಸ್ಕಾರವಾದ ನಂತರ ಸಿವಿಲ್ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಲು ತೊಂದರೆ ಇರಲಿಲ್ಲ. ಪ್ರಕರಣ ದಾಖಲು ಮಾಡುವ 1 ತಿಂಗಳ ಮೊದಲೇ ನಾನು ನನ್ನ ವಕೀಲರ ಕಛೇರಿಗೆ ಹೋಗಿದ್ದೆ. ನಾನು ಹಾಜರುಪಡಿಸಿರುವ ನಿ ಪಿ 8, 13 ಮತ್ತು 14 ಗಳನ್ನು ವಕೀಲರ ಸಲಹೆ ಪಡೆದುಕೊಂಡು ತಯಾರಿಸಿಕೊಂಡಿದ್ದೆ. 3 ದಾಖಲೆಗಳು ನನಗೆ ಒಂದೇ ದಿನ ಸಿಕ್ಕಿದೆ ಎಂದರೆ ನನಗೆ ನೆನಪಿಲ್ಲ. ಪ್ರತಿವಾದಿಗಳು ನನಗೆ ಯಾವುದೇ ರೀತಿ ತೊಂದರೆ ಕೊಡದಿದ್ದರೂ ಸಹ ಅವರ ವಿರುದ್ಧ ಸುಳ್ಳು ದಾವೆ ಸಲ್ಲಿಸಲು ನಿಪಿ 8, 13 ಮತ್ತು 14 ತಯಾರಿಸಿಕೊಂಡಿದ್ದೆ ಎಂದರೆ ಸರಿಯಲ್ಲ.

ಕ್ರಯ ಪತ್ರವನ್ನು ಹೊರತುಪಡಿಸಿ ನನ್ನ ಹೆಸರಿನಲ್ಲಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ಬೇರೆ ದಾಖಲೆಗಳು ಇಲ್ಲ, ಸಾಕ್ಷಿ ಮುಂದುವರೆದು ಋಣಭಾರ ಪತ್ರ ನನ್ನ ಹೆಸರಿನಲ್ಲಿದೆ ಎನ್ನುತ್ತಾರೆ. ನಿಪಿ 15 ರಿಂದ 17 ಆರ್ ಟಿ ಸಿ ಗಳು ದಾವಾ ಆಸ್ತಿಯ ಆರ್ ಟಿ ಸಿ ಗಳಾಗಿರುತ್ತವೆ. ದಾವೆ ಸಲ್ಲಿಸುವ ಸಮಯದಲ್ಲಿ ಸಹ ದಾವಾ ಆಸ್ತಿಯ ಸ್ವಾಧೀನದ ಕಲಂ ನಲ್ಲಿ ಪ್ರತಿವಾದಿಗಳ ಹೆಸರು ಇತ್ತು ಎಂದರೆ ದುರಸ್ಥಿ ಮತ್ತು ಖಾತೆಯಾಗದ ಕಾರಣ ಅವರ ಹೆಸರಿನಲ್ಲಿದೆ ಎನ್ನುತ್ತಾರೆ. ಖಾತೆ ಈಗಲೂ ಸಹ ಪ್ರತಿವಾದಿಗಳ ಹೆಸರಿನಲ್ಲಿ ಬರುತ್ತಿದೆ. ದಾವಾ ಆಸ್ತಿಯ ಕಂದಾಯವನ್ನು ಪ್ರತಿವಾದಿಗಳು ಪಾವತಿಸುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ಕಂದಾಯವನ್ನು ಪಾವತಿಸುತ್ತಿದ್ದು ರಶೀದಿಯನ್ನು ನ್ಯಾಯಾಲಯಕ್ಕೆ ಕೊಡಬಹುದು. ದಾವಾ ಆಸ್ತಿಯನ್ನು ಪ್ರತಿವಾದಿಗಳು ನನಗೆ ಕ್ರಯಕ್ಕೆ ಕೊಡದಿದ್ದರೂ ಸಹ ನಾನು ಸುಳ್ಳು ಕ್ರಯ ಪತ್ರವನ್ನು ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನಲ್ಲಿ ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.
ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.